# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **945** |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡತನ ರೇಖೆಗಿಂತ ಕೆಳಗಿನ ಜನರಿಗೆ ವಸತಿ ಸೌಲಭ್ಯ ಕಲ್ಪಿಸುವುದಕ್ಕಾಗಿ ನಿವೇಶನಗಳನ್ನು ಹಂಚಲು ಗ್ರಾಮೀಣ ವಸತಿ ಯೋಜನೆಗಳನ್ನು ರೂಪಿಸಿರುವುದೇ ; (ಯೋಜನೆಯ ವಿವರವಾದ ಮಾಹಿತಿ ನೀಡುವುದು) | ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಬಡತನ ರೇಖೆಗಿಂತ ಕೆಳಗಿರುವ ಅರ್ಹ ವಸತಿ/ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಲು ಕೆಳಕಂಡ ವಸತಿ/ನಿವೇಶನ ಯೋಜನೆಗಳು ಜಾರಿಯಲ್ಲಿರುತ್ತವೆ.<br><br>**ಗ್ರಾಮೀಣ ವಸತಿ ಯೋಜನೆಗಳು:**<br>1 ಬಸವ ವಸತಿ ಯೋಜನೆ<br>2 ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>3 ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)<br>4 ಡಿ. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ)<br><br>**ನಗರ ವಸತಿ ಯೋಜನೆಗಳು:**<br>1 ವಾಜಪೇಯಿ ನಗರ ವಸತಿ ಯೋಜನೆ(ನಗರ)<br>2 ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ)<br>3 ಡಿ. ದೇವರಾಜು ಅರಸು ವಸತಿ ಯೋಜನೆ(ನಗರ)<br>4 ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)<br><br>**ನಿವೇಶನ ಯೋಜನೆಗಳು**:<br>1. ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ<br>2. ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ |
| ಆ) | ಈ ಸಂಬಂಧ ನಿಗಮವು ಪ್ರತಿ ಪಂಚಾಯ್ತಿಗೆ ಕನಿಷ್ಠ ಮತ್ತು ಗರಿಷ್ಠ ಎಷ್ಟು ನಿವೇಶನ ಹಂಚಿಕೆ ಗುರಿ ನಿಗದಿಪಡಿಸಲಾಗಿದೆ ; | ನಿವೇಶನಗಳ ಹಂಚಿಕೆ ಸಂಬಂಧಪಟ್ಟಂತೆ ಪಂಚಾಯ್ತಿವಾರು/ನಗರ ಸ್ಥಳೀಯ ಸಂಸ್ಥೆವಾರು ಯಾವುದೇ ಕನಿಷ್ಠ ಅಥವಾ ಗರಿಷ್ಠ ಗುರಿ ನಿಗದಿಪಡಿಸುವುದಿಲ್ಲ. ಜಮೀನಿನ ಲಭ್ಯತೆಗನುಗುಣವಾಗಿ ಅರ್ಹ ನಿವೇಶನರಹಿತರನ್ನು ಗ್ರಾಮ ಸಭೆಯಲ್ಲಿ ಆಯ್ಕೆಗೊಳಿಸಿ ನಿವೇಶನ ಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ. |
| ಇ) | ಈ ಸಂಬಂಧ ಖಾಸಗಿ ಜಮೀನು ಖರೀದಿಸಲು ಇರುವ ಮಾರ್ಗಸೂಚಿಗಳೇನು ; ಈ ಯೋಜನೆಗಾಗಿ ಸರ್ಕಾರವು ಎಷ್ಟು ಹಣವನ್ನು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಮೀಸಲಿಡಲಾಗಿದೆ ಇಲ್ಲಿಯವರೆಗೂ ಎಷ್ಟು | ಅರ್ಹ ನಿವೇಶನರಹಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಮಂಜೂರು ಮಾಡಿಸಿಕೊಂಡು ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ಖಾಸಗಿ ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಜಮೀನು ಖರೀದಿ ಸಮಿತಿಯ |

<table>
<tr>
<td></td>
<td>ಖರ್ಚು ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>
ಮೂಲಕ ಭೂಮಾಲೀಕರೊಂದಿಗೆ ಸಂದಾನ ನಡೆಸಿ ಜಮೀನನ್ನು ಖರೀದಿಸಲು ಕ್ರಮ ವಹಿಸಲಾಗುತ್ತಿದೆ.<br><br>
ಸರ್ಕಾರದ ಆದೇಶ ಸಂಖ್ಯೆ:ವಇ 33 ಹೆಚ್‌ಎಹೆಚ್ 2016(ಭಾ-2), ದಿನಾಂಕ:12.07.2016 ರಲ್ಲಿ ಜಮೀನು ಖರೀದಿಯ ದರಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ.
<table>
<tr><th>ಕ್ರ.ಸಂ</th><th>ಪ್ರದೇಶ</th><th>ನಿಗಧಿಪಡಿಸಿರುವ ಗರಿಷ್ಠ ದರ (ರೂ.ಲಕ್ಷಗಳಲ್ಲಿ)</th></tr>
<tr><td>1.</td><td>ಗ್ರಾಮೀಣ ಪ್ರದೇಶ</td><td>9.00</td></tr>
<tr><td>2.</td><td>ಪಟ್ಟಣ ಪಂಚಾಯಿತಿ</td><td>12.00</td></tr>
<tr><td>3.</td><td>ಪುರಸಭೆ</td><td>15.00</td></tr>
<tr><td>4.</td><td>ನಗರಸಭೆ</td><td>22.50</td></tr>
<tr><td>5.</td><td>ಮಹಾನಗರ ಪಾಲಿಕೆ</td><td>37.50</td></tr>
<tr><td>6.</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</td><td>75.00</td></tr>
</table>
<br>
ಜಮೀನು ಖರೀದಿಸಲು ನಿಗಮವು ಕಳೆದ ಆರ್ಥಿಕ ವರ್ಷ ಮತ್ತು ಪ್ರಸಕ್ತ ಆರ್ಥಿಕ ಸಾಲಿನ ಆಗಸ್ಟ್ 2022 ರ ಅಂತ್ಯಕ್ಕೆ ರೂ.36.87 ಕೋಟಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಜಿಲ್ಲಾವಾರು ವಿವರ ಈ ಕೆಳಗಿನಂತಿವೆ.<br>
(ರೂ. ಕೋಟಿಗಳಲ್ಲಿ)
<table>
<tr><th>ಜಿಲ್ಲೆಯ ಹೆಸರು</th><th>ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾದ ಮೊತ್ತ</th></tr>
<tr><td>ಬೆಳಗಾಂ</td><td>0.14</td></tr>
<tr><td>ಬಳ್ಳಾರಿ</td><td>1.24</td></tr>
<tr><td>ದಾವಣಗೆರೆ</td><td>26.85</td></tr>
<tr><td>ಧಾರವಾಡ</td><td>1.22</td></tr>
<tr><td>ಗದಗ</td><td>1.59</td></tr>
<tr><td>ಹಾವೇರಿ</td><td>0.29</td></tr>
<tr><td>ಕೊಪ್ಪಳ</td><td>1.57</td></tr>
<tr><td>ರಾಯಚೂರು</td><td>1.74</td></tr>
<tr><td>ರಾಮನಗರ</td><td>0.05</td></tr>
<tr><td>ತುಮಕೂರು</td><td>0.79</td></tr>
<tr><td>ವಿಜಯಪುರ</td><td>1.24</td></tr>
<tr><td>ಯಾದಗಿರಿ</td><td>0.15</td></tr>
<tr><td>ಒಟ್ಟು</td><td>36.87</td></tr>
</table>
</td>
</tr>
<tr>
<td>ಈ)</td>
<td>ನಗರ ಮತ್ತು ಗ್ರಾಮೀಣ ಭಾಗದ ಬಡವರಿಗಾಗಿ ಸರ್ಕಾರ ಜಾರಿಗೆ ತಂದಿರುವ ವಸತಿ ಯೋಜನೆಗಳಾವುವು ? (ವಿವರವಾದ ಮಾಹಿತಿ ನೀಡುವುದು)</td>
<td>
ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅರ್ಹ ವಸತಿರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>
ಗ್ರಾಮೀಣ ವಸತಿ ಯೋಜನೆಗಳು:<br><br>
1 ಬಸವ ವಸತಿ ಯೋಜನೆ<br>
2 ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>
3 ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)<br>
4 ಡಿ. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ)
</td>
</tr>
</table>

| | | |
|---|---|---|
| | | **ನಗರ ವಸತಿ ಯೋಜನೆಗಳು:**<br>1 ವಾಜಪೇಯಿ ನಗರ ವಸತಿ ಯೋಜನೆ(ನಗರ)<br>2 ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ)<br>3 ಡಿ. ದೇವರಾಜು ಅರಸು ವಸತಿ ಯೋಜನೆ(ನಗರ)<br>4. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) |

ಸಂಖ್ಯೆ :ವಇ 415 ಹೆಚ್‌ಎಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು